ಉಪಾಧ್ಯಕ್ಷರು.—ಅಧ್ಯಕ್ಷರ ಕೊಠಡಿಯಲ್ಲಿ ಎಲ್ಲರೂ ಸೇರಿ ಇದನ್ನು ಪರಿಶೀಲನೆ ಮಾಡೋಣ. ಈ ಬಗ್ಗೆ ಸದಸ್ಯರ ಹಚ್ಚು ಚ್ಯುತಿಯಾಗಿದ್ದರೆ ಸೂಕ್ತ ಕ್ರಮ ಕೈಕೊಳ್ಳೋಣ. ಆದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಈ ವಿಚಾರದಲ್ಲಿ ತಾವು ಏನು ಹೇಳಿದ್ದೀರಿ ಮತ್ತು ಅವರು ಏನೂ ಹೇಳಿದ್ದಾರೆಂಬುದನ್ನೆಲ್ಲಾ ಅಧ್ಯಕ್ಷರ ಕೊಠಡಿಯಲ್ಲಿ ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಕಪ್ಪನವರು ಮ್ಯಾಂಚೆಸ್ಟರ್‌ಗೆ ಹೋಗುವ ಬಗ್ಗೆ ಮಾನ್ಯ ಮಂತ್ರಿಗಳಿಗೆ ಕಾಗದ ಕೊಟ್ಟಿಲ್ಲ ಮತ್ತು ಆ ಬಗ್ಗೆ ಅವರನ್ನು ಕೇಳಿದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಇದನ್ನು ಒಪ್ಪುತ್ತಿಲ್ಲ. ಇದರ ಬಗ್ಗೆ ಅಧ್ಯಕ್ಷರ ಕೊಠಡಿಯಲ್ಲಿ ಮಾತುಕತೆ ನಡೆಸೋಣ ಎಂದು ಹೇಳುತ್ತಿದ್ದಾರೆ, ಅವರು ಹೇಳಿದ ಪ್ರಕಾರ ಇಂದು ಸಂಜೆ ಅಧ್ಯಕ್ಷರ ಕೊಠಡಿಯಲ್ಲಿ ನಾವೆಲ್ಲರೂ ಸೇರಿ ವಿಚಾರ ಮಾಡೋಣ We should be fair to both of them ಅವರಲ್ಲಿ ಏನಾದರು ಈ ಬಗ್ಗೆ ದಾಖಲೆ ಇದ್ದರೆ ತೋರಿಸಲಿ. ಅದರ ಮೇಲೆ ನಾವು ಚರ್ಚೆ ಮಾಡೋಣ. Thereafter we have to come back here only.

ಶ್ರೀ ಎಂ.ಪಿ. ಪ್ರಕಾಶ್.—ಆಗಬಹುದು.

ಉಪಾಧ್ಯಕ್ಷರು.—ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಎ. ಕೃಷ್ಣಪ್ಪ.—ಇದರಲ್ಲಿ ನನ್ನ ಹೆಸರು ಸಹ ಇದೆ. ಆದ್ದರಿಂದ ನಾನೂ ಸಹ ಉಪ ಪ್ರಶ್ನೆ ಕೇಳುತ್ತೇನೆ.

ಉಪಾಧ್ಯಕ್ಷರು.—ಮುಂದಿನ ಪ್ರಶ್ನೆ ಕೇಳಲು ಮಾನ್ಯ ಪಾಟೀಲ್ ಅವರನ್ನು ನಾನು ಕರೆದಿದ್ದೇನೆ; ತಾವು ಕುಳಿತುಕೊಳ್ಳಿ.

ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ.

೬೯೯. ಶ್ರೀ ಕೆ. ಹಚ್. ಪಾಟೀಲ್ (ಗದಗ) —ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳ ತಂಡಕ್ಕೆ ಖರ್ಚು ಮಾಡಿದ ವೆಚ್ಚವೆಷ್ಟು ?

ಆ) ಸಾಧಿಸಿದ ವಾಸ್ತವಿಕ ಗುರಿ.

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರು).—

ಅ) ರೂ. ೭,೭೮,೯೩೩ ಮಾನ್ಯ ಮುಖ್ಯ ಮಂತ್ರಿಗಳ ಹಾಗೂ ಸಚಿವರುಗಳ ಪ್ರವಾಸ ವೆಚ್ಚ ಸೇರಿಲ್ಲ.)

ಆ) ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿ ಈ ಕೆಳಗಿನ ಉದ್ದೇಶಗಳನ್ನು ಸಾಧಿಸಲಾಗಿದೆ.

೧ ಕರ್ನಾಟಕದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಪ್ರಚಾರ.

೨ ಅದಿವಾಸಿ ಭಾರತೀಯರು ಅದರಲ್ಲಿಯೂ ಕನ್ನಡಿಗರು ಕರ್ನಾಟಕ ರಾಜ್ಯದ ಅಭಿವೃದ್ಧಿಯಲ್ಲಿ ವಿವಿಧ ರೀತಿಯಲ್ಲಿ ಪಾಲ್ಗೊಳ್ಳುವುದಕ್ಕೆ ಉತ್ತೇಜನ

೩ ಕರ್ನಾಟಕದ ನಿಸರ್ಗ ಸೌಂದರ್ಯ ಮತ್ತು ಪ್ರೇಕ್ಷಣೀಯ ಬಗ್ಗೆ ಪ್ರಚಾರ.

೪ ಕರ್ನಾಟಕದ ಕಲಾವಿದರಿಗೆ ಉತ್ತೇಜನ ಮತ್ತು ವಿಶೇಷ ಅನುಭವ.

೫ ಹೊರನಾಡ ಕನ್ನಡಿಗರೊಡನೆ ಹೆಚ್ಚಿನ ಬಾಂಧವ್ಯ.

೬ ಕರ್ನಾಟಕದ ರೇಷ್ಮೆ ಕರಕುಶಲ ವಸ್ತುಗಳು ಚರ್ಮದ ಸಿದ್ಧಪಡಿಸಿದ ವಸ್ತುಗಳು ಇವುಗಳ ಮಾರಾಟ.

ಶ್ರೀ ಕೆ. ಹೆಚ್. ಪಾಟೀಲ್.—ಸನ್ಮಾನ್ಯ ಉಪಾಧ್ಯಕ್ಷರೆ, ಅಧಿಕಾರಿಗಳು ಮಾನ್ಯ ಸಚಿವರಿಗೆ ಸಮರ್ಪಕವಾದ ಉತ್ತರ ಕೊಟ್ಟಿಲ್ಲ ಎಂದೂ ನನ್ನ ಭಾವನೆ. ನಾನು ಅವರಿಗೆ ವಿನಯಪೂರ್ವಕವಾಗಿ ಕೇಳುತ್ತೇನೆ. ೭ ಲಕ್ಷದ ೭೮ ಸಾವಿರದ ೯೩೩ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದಾರೆ. ಈ ಹಿಂದೆ ಕೊಟ್ಟಂಥ ಉತ್ತರದಲ್ಲಿ ೧೫ ಲಕ್ಷದ ೨೩ ಸಾವಿರದ ೯೭೩ ರೂಪಾಯಿಗಳೂ ಮುಖ್ಯ ಮಂತ್ರಿಗಳದ್ದು ಮತ್ತು ತಮ್ಮದು ಪ್ರವಾಸದ ಖರ್ಚು ಬಿಟ್ಟು ಆಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಅದೂ ಖರೇನೊ, ಇದು ಖರೇನೊ ಎನ್ನುವುದನ್ನು ತಾವೇ ವಿಚಾರ ಮಾಡಿ ಹೇಳಿ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಸಭಾಧ್ಯಕ್ಷರೆ, ೭ ಲಕ್ಷ ೭೮ ಸಾವಿರದ ೯೩೩ ರೂಪಾಯಿಗಳು ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ತಂಡಕ್ಕೆ ಖರ್ಚು ಮಾಡಿದ ವೆಚ್ಚ ಅಂದಾಗ ಇದು ಕಲಾವಿದರ ತಂಡಕ್ಕೆ ಸಂಬಂಧಪಟ್ಟದ್ದು. ಹಿಂದಿನ ಪ್ರಶ್ನೆಗೆ ಕೊಟ್ಟಂಥ ಉತ್ತರದಲ್ಲಿ ಹೇಳಿರತಕ್ಕಂಥಾದ್ದು, ೧೫ ಲಕ್ಷಕ್ಕಿಂತಲೂ ಹೆಚ್ಚು ಖರ್ಚು ಮಾಡಿರತಕ್ಕಂಥಾದ್ದು ಇಡೀ ಮ್ಯಾಂಚೆಸ್ಟರ್ ಸಮ್ಮೇಳನಕ್ಕೆ ಕರ್ನಾಟಕ ರಾಜ್ಯ ಖರ್ಚು ಮಾಡಿರತಕ್ಕಂಥಾ ಮೊತ್ತ. ಆದರೆ ಸಮ್ಮೇಳದಲ್ಲಿ ಭಾಗವಹಿಸಿದ ತಂಡ ಅಂದಾಗ ಸುಮಾರು ೨೦–೨೫ ಜನ ಕಲಾವಿದರ ತಂಡವನ್ನು ಕಳಂಹಿಸಿದ್ದೆವು. ಆ ತಂಡಕ್ಕೆ ಆಗಿರತಕ್ಕಂಥ ಖರ್ಚು ೭ ಲಕ್ಷ ೭೮ ಸಾವಿರದ ೯೩೩ ರೂಪಾಯಿಗಳು.

ಶ್ರೀ ಕೆ. ಹೆಚ್. ಪಾಟೀಲ್.—ತಾವು ಡಿಫೆಂಡ್ ಮಾಡುವಾಗ ಈ ಅಧಿಕಾರಸ್ಥರನ್ನು ಡಿಫೆಂಡ್ ಮಾಡಬೇಡಿ. ಇಲ್ಲಿ ಮ್ಯಾಂಚೆಸ್ಟರ್‌ನಲ್ಲಿ ಕಲಾವಿದರ ಖರ್ಚು ೫ ಲಕ್ಷ ೧೫ ಸಾವಿರ ಎಂದು ಹೇಳಿದಿರಿ. ಆಮೇಲೆ ೭ ಲಕ್ಷ ೭೮ ಸಾವಿರ ಎಂದು ಹೇಳಿದಿರಿ. ನಿಮ್ಮದು ಅಂದರೆ ಮಂತ್ರಿಗಳದ್ದು ತಪ್ಪಲ್ಲ. ನಾನೂ ಮಂತ್ರಿ ಪದವಿಯಲ್ಲಿದೆ, ನನಗೆ ಗೊತ್ತಿದೆ. ಅವರು ಮೈಮೇಲೆ ಎಚ್ಚರವಿಲ್ಲದೆ ನಿಮಗೆ ಅಂಕ ಅಂಶಗಳನ್ನು ಕೊಡುತ್ತಾರೆ. ಅವರು ಹೇಳಿದ ನ್ನು ಓದಿ ಡಿಫೆಂಡ್ ಮಾಡಿದರೆ ಮುಂದೆ ಹೀಗೇ ಅಡ್ಮಿನಿಸ್ಟ್ರೇಷನ್ ನಡೆಯುತ್ತದೆ. ಆದ್ದರಿಂದ ಇದನ್ನು ದಯವಿಟ್ಟು ಪರಿಶೀಲನೆ ಮಾಡಿ, ಪರಿಶೀಲನೆ ಮಾಡಿ ಆ ಅಧಿಕಾರಿಗಳಿಗೆ ಸೂಕ್ತವಾದಂಥ ಬದಲಾವಣೆ ಮಾಡಿಕೊಳ್ಳುವುದಕ್ಕೆ ವಾರ್ನಿಂಗ್ ಕೊಡಿ, ಇದೂ ಒಂದು. ಎರಡನೆಯದೂ, ನಾನು ತಮ್ಮಲ್ಲಿ ತುಂಬ ಸವಿನಯವಾಗಿ ಕೇಳುತ್ತೇನೆ. ನಿಮ್ಮ ಹೃದಯವನ್ನು ನೀವು ಪರಿಶೋಧನೆ ಮಾಡಿ ಇವತ್ತು ನೀವು ಮ್ಯಾಂಚೆಸ್ಟರಿಗೆ ಹೋಗಿ ಕನ್ನಡ ಬರಲಾರದಂಥ ಪ್ರದೇಶದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಮಾಡುತ್ತೇವೆ ಅಂದರೆ ಎಷ್ಟು ವ್ಯಂಗ್ಯವಾಗಿ ಮಾತನಾಡಲಿಕ್ಕಾಗುತ್ತದೆ. ಅದರ ಬದಲು ಆದವಾನಿ, ಆಲೂರು, ರಾಯದುರ್ಗಕ್ಕೆ ಹೋಗಿ ಆ ಭಾಗಗಳನ್ನು ಏನು ನಾವು ಕಳೆದುಕೊಂಡಿದ್ದೇವೆ, ಅಲ್ಲಿ ಹೋಗಿ ಜನರನ್ನು ಎಚ್ಚರಿಸುತ್ತೇವೆ ಎಂದರೆ ಅದು ಸರಿ. ನೀವು ಕಾಸರಗೋಡಿಗೆ ಹೋಗಿ ಇದನ್ನು ಮಾಡಿದ್ದರೂ ಹೆಚ್ಚು ಶ್ರೇಯಸ್ಕರವಾಗುತ್ತಿತ್ತು, ಹೆಸರುಗಳನ್ನು ನಾವು ಶಿಫಾರಸು ಮಾಡಿ ಕಳಿಸಿಕೊಟ್ಟೆವು. ಇದರ ಜೊತೆಗೆ ಪ್ರಖ್ಯಾತರಾಗಿರತಕ್ಕಂಥ ಚಲನಚಿತ್ರದ, ಸಾಹಿತ್ಯದ, ಕ್ರೀಡೆಯ ಮತ್ತು ಹೆಸರಾಂತ ವ್ಯಕ್ತಿಗಳ ಪ್ರತಿನಿಧಿಗಳನ್ನು ಕರ್ನಾಟಕ ರಾಜ್ಯದ ಪರವಾಗಿ ಕಳಿಸಿಕೊಟ್ಟಿದ್ದೇವೆ. ಆದುದರಿಂದ ಮ್ಯಾಂಚೆಸ್ಟರ್‌ನಲ್ಲಿ ಆಗಿರತಕ್ಕಂಥ ಸಮ್ಮೇಳನ ಇಂಗ್ಲೆಂಡ್ ಜನಗಳಿಗಾಗಿ ಆಗಿರತಕ್ಕಂಥಾದ್ದಲ್ಲ ಕನ್ನಡಿಗರೇ ವಿರ್ಪಾಡು ಮಾಡಿರತಕ್ಕಂಥ ಒಂದು ಸಂಸ್ಥೆಯಮತಿಯಿಂದ ಅದೂ ನಮ್ಮ ಇಲಾಖೆಯಲ್ಲಿರತಕ್ಕಂಥ ಅನುದಾನದಲ್ಲಿ ಮತ್ತು ಕಳೆದ ವರ್ಷ ಆದಂಥ ರೀತಿಯಲ್ಲಿ, ಪದ್ಧತಿಯಲ್ಲಿ ಈ ಕಾರ್ಯಕ್ರಮವನ್ನು ಮಾಡಲಾಗಿದೆ, ಈಗಾಗಲೇ ನಾನು ಅರಿಕೆ ಮಾಡಿಕೊಂಡಂತೆ ಮ್ಯಾಂಚೆಸ್ಟರ್‌ನಲ್ಲಿ ನಡೆದಂಥ ಕಾರ್ಯಕ್ರಮದ ಔಚಿತ್ಯ ಮತ್ತು ಅನೌಚಿತ್ಯದ ಬಗ್ಗೆ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಸ್ವತಂತ್ರರಿದ್ದಾರೆ. ಇದರ ಬಗ್ಗೆ ನಾವು ಬಹಳ ಉತ್ತಮವಾದಂಥ ಕೆಲಸವನ್ನು ಮಾಡಿದ್ದೇವೆ. ಈಗಾಗಲೇ ಉತ್ತರದಲ್ಲಿ ಕೊಟ್ಟಂತೆ ಸುಮಾರು ೬ ವಿಚಾರಗಳ ಬಗ್ಗೆ ಬಾಂಧವ್ಯವನ್ನು ಬೆಳೆಸಲಿಕ್ಕೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯತೆಯಾಗಿದೆ.

ತಾವು ಅನೇಕ ವಿಚಾರಗಳಿಗೆ ಉತ್ತರ ಕೊಟ್ಟಿರಿ. ಆದರೆ, ಮುಖ್ಯಮಂತ್ರಿಗಳ, ಮಂತ್ರಿಗಳ ಪ್ರವಾಸ ಮತ್ತು ಇತರೆ ಖರ್ಚುಗಳ ವಿವರವನ್ನು ಕೊಡಲಿಲ್ಲ, ಇದನ್ನು ಮಂತ್ರಿಗಳು ಕೊಡುವುದಕ್ಕೆ ಅಸಮರ್ಥರಾಗಿದ್ದಾರೋ ಏನೋ ಗೊತ್ತಿಲ್ಲ, ಅಥವಾ ಈ ಸದನದ ವಜರಿಗೆ ತರಬಾರದೆಂದು ಏನಾದರೂ ಬಿಟ್ಟಿದ್ದಾರೆಯೇ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ಮಂಖ್ಯಮಂತ್ರಿಗಳ ಮತ್ತು ಸಚಿವರುಗಳ ಪ್ರವಾಸದ ವೆಚ್ಚ ಇದರಲ್ಲಿ ಸೇರಿಲ್ಲ. ಟಿ. ಎ. ಬಿಲ್ಲುಗಳನ್ನು ತಯಾರು ಮಾಡಿ ಕಳುಹಿಸದೇ ಇರುವ ಕಾರಣ, ಅದು ಬಂದಿಲ್ಲ. ಮುಖ್ಯ ಮಂತ್ರಿಗಳ ಮತ್ತು ಸಚಿವರುಗಳ ಡಿ. ಎ. ವೆಚ್ಚವನ್ನು ಸೇರಿಸ ಲಾಗಿದೆ. ವಿಮಾನಯಾನದ ಟಿಕೇಟಿನ, ಆತಿಥ್ಯದ ಖರ್ಚನ್ನು ಕನ್ನಡ ಬಳಗದವರು ಬರಿಸಿದ್ದಾರೆ. ಇದರ ವಿಚಾರದಲ್ಲಿ ಈಗಾಗಲೇ ಲಕ್ಕಪ್ಪನವರಿಗೆ ಉತ್ತರ ಕೊಟ್ಟಿದ್ದೇನೆ. ಡಿ, ಎ. ಗೆ ೩೦,೦೦೦ ಕ್ಕಿಂತ ಹೆಚ್ಚು ಖರ್ಚು ಬರುವುದಿಲ್ಲ.

ಶ್ರೀ ಡಿ. ಜಿ. ಬಸವನಗೌಡ.—ಸ್ವಾಮಿ, ಇದು ಕ್ವಶ್ಚನ್ ಅವರ್ಸೋ, ಕ್ವಶ್ಚನ್ಸ್ ಅವರ್ಸೋ ಎಂಬುದು ನಮಗೆ ಗೊತ್ತಾಗುತ್ತಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಸೋಲ್ ಒಲಂಪಿಕ್ಸ್‌ಗೆ ಭಾರತದಿಂದ ನೂರಾರು ಜನರನ್ನು ಕಳುಹಿ ಸಿದ್ದರೂ ಸಹ ಒಂದೇ ಒಂದು ಬಹುಮಾನ ಬರಲಿಲ್ಲ. ಅದು ದಂಡ ತಾನೆ ? ಇದಕ್ಕೆ ತಾವು ಉತ್ತರ ಕೊಡಿ, ಮ್ಯಾಂಚೆಸ್ಟರ್‌ನಲ್ಲಿ ಕನ್ನಡ ಸಮ್ಮೇಳನವನ್ನು ಮಾಡಿದ ಉದ್ದೇಶ. ಬೇರೆ ರಾಷ್ಟ್ರಗಳ ಜೊತೆಗೆ ನಮ್ಮ ಬಾಂಧವ್ಯ ಬೆಳೆಯಬೇಕೆಂಬ ಉದ್ದೇಶ ದಿಂದ ಮಾಡಿದ್ದಾರೆ.

(ಗೊಂದಲ)

ಶ್ರೀ ಪಂಪಾಪತಿ.—ಹೆಮ್ಮಿಗೆಯವರನ್ನು ಸೋಲ್ ಒಲಂಪಿಕ್ಸ್‌ಗೆ ಕಳುಹಿಸಿದ್ದರೆ, ಬಂಗಾರದ ಪದಕ ತರುತ್ತಿದ್ದರು.

ಶ್ರೀ ಎನ್. ಎಂ, ಆಡ್ಯಂತಾಯ.—ಮ್ಯಾಂಚೆಸ್ಟರ್‌ನಲ್ಲಿರುವ ಕನ್ನಡ ಬಳಗದವರ ಆಹ್ವಾನದ ಮೇರೆಗೆ ಹೋಗಿದ್ದೆವು ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು. ಅವರ ಆಹ್ವಾನದ ಮೇರೆ ಟ್ರೂಪ್‌ಗಳನ್ನು ಕಳಿಸಿಕೊಡಲಾಗಿತ್ತೆಂದು ಕೂಡ ಹೇಳಿದರು. ಅಲ್ಲಿರತಕ್ಕ ಕನ್ನಡ ಬಳಗದ ಸದಸ್ಯತ್ವದ ಸಂಖ್ಯೆ ಎಷ್ಟು ? ಅದರಿಂದಾಗಿರುವ ಪ್ರಯೋಜನ ಏನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಉಪಾಧ್ಯಕ್ಷರೆ, ಸದಸ್ಯತ್ವದ ನಿಖರವಾದ ಸಂಖ್ಯೆ ಇನ್ನಲ್ಲಿ ಇಲ್ಲ. ಸಮ್ಮೇಳನಕ್ಕೆ ಭಾರತದಾದ್ಯಂತ ಸದಸ್ಯರುಗಳು ಬಂದಿದ್ದು ವಿಸಿಟರ್ ಪುಸ್ತಕದಲ್ಲಿ ಅವರ ಹೆಸರು ಇತ್ಯಾದಿಯನ್ನು ನಮೂದಿಸಿದ್ದಾರೆ. ಇಂಗ್ಲೆಂಡ್‌ನಿಂದ ಸುಮಾರು ೩೫೦ ಕ್ಕೂ ಹೆಚ್ಚು ಜನ ಬಂದಿದ್ದರು. ಯೂರೋಪಿನಿಂದ ೧೦೦ ಕ್ಕೂ ಹೆಚ್ಚು ಜನ ಬಂದಿದ್ದರು, ಅಮೇರಿಕಾದಿಂದ ೪೦ ಕೂ ಹೆಚ್ಚು ಜನ ಬಂದಿದ್ದರು. ಇತರೇ ದೇಶಗಳಿಂದಲೂ ಜನ ಬಂದಿದ್ದರು. ಅಲ್ಲಿ ಏರ್ಪಡಿಸಿದ್ದ ವಸ್ತುಪ್ರದರ್ಶನ ಮತ್ತು ಕಲೆಯನ್ನು ನೋಡಿ ಆನಂದಿಸಿದ್ದಾರೆ. ಮ್ಯಾಂಚೆಸ್ಟರ್ ಮೇಯರ್‌ರವರು ಬರೆದಿರತಕ್ಕ ವಿಷಯಗಳು ಇವೆ. ಅದಕ್ಕೆ ಸಂಬಂಧಪಟ್ಟ ಛಾಯಾಚಿತ್ರವನ್ನು ತೆಗೆಯಲಾಗಿದ್ದು, ಇವತ್ತೋ ನಾಳೆಯೋ ದೂರದರ್ಶನದವರು ಪ್ರದರ್ಶನ ಮಾಡುತ್ತಾರೆ. ಇದನ್ನು ತಮ್ಮ ಮುಖಾಂತರ ಆಡ್ಯಾಂತಾಯರವರಿಗೆ ಕಳುಹಿಸಿಕೊಡುತ್ತೇನೆ, ಅವರು ಅದನ್ನು ಮಾಡಬಹುದು.

ಮಂಗಳೂರು ತಾಲ್ಲೂಕಿನಲ್ಲಿ ಜನತಾ ಗೃಹಗಳು

೪೦೨೭. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿ ೧೯೮೫-೮೬, ೧೯೮೬-೮೭, ೧೯೮೭-೮೮ನೇ ಸಾಲಿನಲ್ಲಿ ಎಷ್ಟು ಜನತಾ ಗೃಹಗಳನ್ನು ನಿರ್ಮಾಣ ಮಾಡಲಾಗಿದೆ.

ಆ) ಈ ಸಾಲುಗಳಲ್ಲಿ ಜನತಾ ಮನೆಗಳಿಗಾಗಿ ಬಂದ ಅರ್ಜಿಗಳಲ್ಲಿ ಎಷ್ಟು ಇನ್ನೂ ವಿಲೇವಾರಿ ಆಗದೆ ಬಾಕಿ ಉಳಿದಿವೆ ?

ಇ) ಅದರಲ್ಲಿ ಹರಿಜನರಿಗೆ ಮತ್ತು ಗಿರಿಜನರಿಗೆ ನೀಡಿರುವ ಗೃಹಗಳೆಷ್ಟು ?

ಈ) ಅರ್ಜಿಗಳು ಬಾಕಿ ಉಳಿಯಲು ಕಾರಣಗಳೇನು ?